

ಬದುಕಿನ ಊಹಾತೀತ ಪರಿಣಾಮಗಳಿಗೆ ಕಾರಣವಾಗುವ ಈ ಮರುಭೂಮಿ ಪರ್ವತ ಕಡಲುಗಳು, ತಮ್ಮ ನಿಜವಾದ ಎತ್ತರ ಆಳ ಹರಹುಗಳನ್ನು ಕಳೆದುಕೊಂಡು, ಗುರುತು ಹಿಡಿಯಲಾಗದಂತೆ ಸಂಕೋಚಗೊಳ್ಳುವವು. ತಮ್ಮ ವಿರಾಟ್ ರೂಪವನ್ನು ಪ್ರದರ್ಶಿಸಲು ಇವು ತೋರುವ ಹಿಂಜರಿಕೆ, ಧೀಮಂತರ ನಮ್ರತೆಯಂತೆಯೂ ಭಾಸವಾಗುವುದು.

ಇಂತಹ ವೈಮಾನಿಕ ನೋಟದ ಭೀಕರ ಪರಿಣಾಮವೆಂದರೆ, ಅದು ಕಾಣಿಸುವ ಭೂಮಂಡಲದ ಸ್ಥಗಿತಚಿತ್ರ. ಎದುರು ನಿಂತ ವ್ಯಕ್ತಿಯನ್ನು ಕೊಲ್ಲುವುದು ಸುಲಭವಲ್ಲ. ನಿರ್ಜೀವ ನಕ್ಷೆಯಂತೆ ಕಾಣುವ ಊರುಗಳ ಮೇಲೆ ನಿರ್ಭಾವುಕವಾಗಿ ಬಾಂಬ್ ಹಾಕಬಹುದು. ಸೈನಿಕರ ಗುಂಪೆಂದು ತಿಳಿದು, ಅಮೆರಿಕದ ವಿಮಾನಗಳು ಆಫಘಾನಿಸ್ತಾನದಲ್ಲಿ ಎಷ್ಟೊಂದು ಮದುವೆ ದಿಬ್ಬಣಗಳನ್ನು ಕೊಂದವು? ಆದರೆ, ಜಪಾನಿನ ಮೇಲೆ ಬಾಂಬು ಹಾಕಿದ ಪೈಲಟುಗಳು, ನೆಲಕ್ಕಿಳಿದ ಬಳಿಕ ಕಂಡ ವಿನಾಶಕಾರಿ ವಿಧ್ವಂಸ ಕಂಡು ಅಕ್ಷರಶಃ ಹುಚ್ಚರಾದರು. ಕೆಲವರು ಪರಿತಾಪದಿಂದ ಆತ್ಮಹತ್ಯೆಗೈದರು. ಮತ್ತೆ ಕೆಲವರು ಸುತ್ತಲ ಬದುಕನ್ನು ಒಪ್ಪಗಾಣಿಸಲು ಬಾಕೀ ಆಯಸ್ಸನ್ನು ತೇದರು. ಕೊಲುವ ಸೈನಿಕರಿಗೆ ಹೋಲಿಸಿದರೆ, ವಿಶ್ವರಹಸ್ಯ ಶೋಧಿಸುವ ಗಗನಯಾತ್ರಿಗಳ ಅನುಭವ ಶ್ರೇಷ್ಠವೂ ಅನನ್ಯವೂ ಆಗಿದೆ. ನಿಂತಪರ್ವತ, ಹರಡಿದ ಊರು, ಬೆಳೆದ ದಟ್ಟಾರಣ್ಯಗಳನ್ನು ತೊಡುಗೆಯಾಗಿ ತೊಟ್ಟು, ಕುದಿವಸಮುದ್ರ ಹಾಗೂ ಹರಿವ ಹೊಳೆಗಳನ್ನು ಉಡುಗೆಯಾಗಿ ಉಟ್ಟು, ಚೆಂಡಿನಂತೆ ಭ್ರಮಿಸುವ ಭೂಗ್ರಹವನ್ನು ಅವರು ದರ್ಶಿಸಿದರು; ‘ಓಹ್! ಭೂಗ್ರಹ ಎಷ್ಟು ಚೆಲುವಾಗಿದೆ’ ಎಂದು ಕವಿಗಳಂತೆ ಉದ್ಗರಿಸಿದರು. ಬ್ರಹ್ಮಾಂಡದಲ್ಲಿ ಜೀವಂತವಾದ ಆಕಾಶಕಾಯ ಭೂಮಿಯೊಂದೇ. ಅದನ್ನು ಜತನದಿಂದ ಕಾಪಾಡಿಕೊಳ್ಳಬೇಕು ಎಂದು ಸಾರಿದರು.

ಧರೆ, ಅಂತರಿಕ್ಷ, ಸಾಗರಗಳನ್ನು ಅವುಗಳ ಮೇಲೆಯೇ ನಿಂತು ಅವನ್ನು ನೋಡುವುದರಲ್ಲಿ ಹೆಚ್ಚಿನ ಸ್ವಾರಸ್ಯವಿಲ್ಲ. ಒಂದರ ಮೇಲಿದ್ದು ಇನ್ನೊಂದು ಕಂಡಾಗಲೇ ಹೊಸ ಅರ್ಥ. ಲೋಕವು ತಾನಿರುವಂತೆ ತೋರುವುದಿಲ್ಲ. ನಮ್ಮ ದೃಷ್ಟಿಯಂತೆ ಕಾಣುತ್ತದೆ. ಲೋಕಾನುಭವವು ಏನನ್ನು ನೋಡುತ್ತೇವೆ ಎನ್ನುವುದರಿಂದ ನಿಶ್ಚಯವಾಗುವುದಿಲ್ಲ. ನಾವು ನೋಡುವ ಕಾಲ, ದೂರ ಹಾಗೂ ನಮ್ಮ ಮನಃಸ್ಥಿತಿಗಳು ಅದರ ಸ್ವರೂಪವನ್ನು ನಿರ್ಧರಿಸುತ್ತವೆ. ಆದರೂ ದೃಷ್ಟಿಯಂತೆ ಸೃಷ್ಟಿ ಎನ್ನುವುದು ಅರ್ಧಸತ್ಯ. ಯಾಕೆಂದರೆ, ಕಂಡ ನೋಟವು ಕಂಡವರ ಲಾಗಾಯ್ತಿನ ದೃಷ್ಟಿಯನ್ನೇ ಬದಲಿಸಬಹುದು. ಅನುಭವವು ಸ್ಮರಣೆಯ ಮಹಾಗೋದಾಮಿನಲ್ಲಿ ಉಳಿದು, ಅವರು ಬೆಳೆದಂತೆ ತಾನೂ ಬೆಳೆಯುತ್ತ ಬೇರೆಯದೇ ಚಿತ್ರವಾಗಬಹುದು – ಗಾಳಿಯಲ್ಲಿ ಹಾರಿಬಂದ ಬೀಜವೊಂದು ನೆಲದೊಳಗೆ ಮೊಳೆತು ವೃಕ್ಷರೂಪ ಧರಿಸುವಂತೆ; ಬಾಲ್ಯದಲ್ಲಿ ಬೀದಿದೂಳಲ್ಲಿ ಆಡಿದ ಆಟದ ಕಪ್ಪುಬಿಳುಪಿನ ಸಾದಾ ನೆನಪು, ಮುಪ್ಪಿನಲ್ಲಿ ಹೊಸಹುಟ್ಟು ಪಡೆದು ವರ್ಣರಂಜಿತಗೊಳ್ಳುವಂತೆ. ನಮ್ಮೊಳಗೆ ಬೆಳೆದು ರೂಪಾಂತರಗೊಳ್ಳುವ ಈ ಅನುಭವ, ನೆರೆಹೊರೆಯಲ್ಲಿ ಹಂಚಿಕೊಳ್ಳುವಾಗ ಕಲೆಯಾಗಿ ಕಾಣ್ಕೆಯಾಗಿ ಅಂತಃಕರಣವಾಗಿ ಮತ್ತೊಂದು ರೂಪಕ್ಕೆ ದಾಟುತ್ತದೆ. ಈ ದಾಟುವಿಕೆಯಲ್ಲಿ ಸೃಷ್ಟಿಯಾಗುವ ಕಲೆ–ತತ್ವಗಳು, ಸಹೃದಯಿಗಳಿಗೆ ಮುಟ್ಟುವಾಗ ಮೂರನೇ ಹುಟ್ಟನ್ನೂ ಪಡೆಯಬಹುದು.

ದ್ಯಾವಾಪೃಥಿವಿಗಳು ವಾಸ್ತವದಲ್ಲಿ ಕೂಡಿಕೊಂಡಿಲ್ಲ, ನಿಜ. ಆದರೆ, ಅವು ಅಗಲಿ ಕೂಡ ಇಲ್ಲ. ಅವುಗಳ ಮಧ್ಯೆ ಸಜೀವವಾದ ಚಲನಶೀಲ ಸಂಬಂಧವಿದೆ. ಅಂತರಿಕ್ಷದಿಂದ ಸುರಿವ ಮಳೆ ಬಿಸಿಲುಗಳಿಗೆ, ಭೂಮಿ ಮೇಲಣ ಗಿಡಮರ, ಸಮುದ್ರ, ನದಿ, ಕೀಟ, ಪ್ರಾಣಿ, ಮನುಷ್ಯರ ಬಾಳು ಅರಳುತ್ತದೆ, ಬಾಡುತ್ತದೆ. ಇಂತಹ ಸಜೀವ ‘ಸಂಬಂಜ’ವುಳ್ಳ ಭೂಮಿ ಇಲ್ಲದಿದ್ದರೆ, ಗಾಳಿ ಬಿಸಿಲು ಮಳೆಗಳಿಗೆ, ಸಿಡಿಲು ಮಿಂಚು ಗುಡುಗುಗಳಿಗೆ ಅರ್ಥ ಇರುತ್ತಿರಲಿಲ್ಲ. ಇರುವುದನ್ನು ಬಿಟ್ಟು ಇರದುದರೆಡೆಗೆ ತುಡಿಯಬಹುದು. ಆದರೂ ಬಿಟ್ಟು ಬಂದ ‘ಇರುವುದು’, ಅಗಲಿದ ಪ್ರೇಮಿಯಂತೆ ಉತ್ಕಟವಾಗಿ ಕಾಡುತ್ತದೆ. ಹೀಗೆ ಕಾಡದಿದ್ದರೆ ‘ಇರದುದರ’ ತುಡಿತಕ್ಕಾದರೂ ಏನು ಕಿಮ್ಮತ್ತಿದೆ?

●